# ನಂಗನೇ ನೆಮ್ಮದಿಂದ ಬದ್‌ಕಲ್ ಬುಡದಾನು..!

**ಇದು ನಾಗರಹೊಳೆ ಗದ್ದೆಹಾಡಿ ಬುಡಕಟ್ಟು ಜನಾಂಗದ ಗೋಳಿನ ಕಥೆ. ಇವರ ಗೋಳನ್ನು ಕೇಳಿ ಪರಿಹರಿಸಲೂ ನಾಗರಿಕ ಜಗತ್ತಿಗೆ ಸಮಯವಿಲ್ಲ!**

ಚಿತ್ರ– ಲೇಖನ:
**ಪುತ್ತರಿರ ಕರುಣ್ ಕಾಳಯ್ಯ/ಪಪ್ಪು ತಿಮ್ಮಯ್ಯ**







‘ರಾಜೀವ್‌ಗಾಂಧಿ ರಾಷ್ಟ್ರೀಯ ಉದ್ಯಾನ’ವೆಂದು ಗುರುತಿಸಲಾಗಿರುವ ನಾಗರಹೊಳೆ ಮೀಸಲು ಅರಣ್ಯದ ಗದ್ದೆ ಹಾಡಿಯ ಮೂಲ ಬುಡಕಟ್ಟು ಜನಾಂಗದ್ದು ಸದ್ಯಕ್ಕೆ ಮುಗಿಯದ ಗೋಳು. ಅರಣ್ಯದೊಳಗೆ ವಾಸವಾಗಿರುವ ಕಾಡಿನ ಮಕ್ಕಳ ನೋವಿನ ಕೂಗು ಯಾರಿಗೂ ಕೇಳುತ್ತಿಲ್ಲ.

ಸುಮಾರು ಎಂಟು ಶತಮಾನಗಳಿಂದ ಇವರ ಅಜ್ಜ– ಮುತ್ತಜ್ಜಂದಿರು ಅರಣ್ಯದೊಳಗೆ ಸಣ್ಣ ಗುಂಪುಗಳಲ್ಲಿ ಬಿಸಿಲು, ಮಳೆ, ಚಳಿಗಾಳಿಗೆ ಮೈಯೊಡ್ಡಿ ಬದುಕಿದವರು. ಕಾಡಿನ ಜತೆಗೆ ಇವರದ್ದು ತಲೆಮಾರುಗಳ ಸಂಬಂಧ. ಈಗ ಈ ಹಾಡಿಗರನ್ನು ಇಲ್ಲಿಂದ ಒಕ್ಕಲೆಬ್ಬಿಸಲು, ಬೇರೆಡೆಗೆ ಸ್ಥಳಾಂತರಿಸಲು ಅರಣ್ಯ ಇಲಾಖೆ ಯತ್ನಿಸುತ್ತಿದೆ. ಆದರೆ ಈ ಆದಿವಾಸಿಗಳಿಗೆ ಕಾಡು ಬಿಡಲು ಮನಸ್ಸಿಲ್ಲ. ‘ನಂಗ ಬಹಳ ಕಷ್ಟಲ್ ಇದ್ದೇಗೆ. ನಂಗನೇ ನೆಮ್ಮದಿಂದ ಬದ್‌ಕಲ್ ಬುಡದಾನು..’ ಎಂದು ತಮ್ಮ ಆದಿವಾಸಿ ಭಾಷೆಯಲ್ಲಿ ಈ ಜನರು ಕಂಡವರ ಜತೆಗೆಲ್ಲ ನೋವು ತೋಡಿಕೊಳ್ಳುತ್ತಿದ್ದಾರೆ.

ನಾಗರಹೊಳೆಯ ಕಾಡಿನೊಳಗಿರುವ ಕುಂತುರು ಕೋಟೆಯ ಜಾಗದಲ್ಲೇ ಜೇನುಕುರುಬ ಬುಡಕಟ್ಟು ಜನಾಂಗದ ಜನರು ಶತಮಾನಗಳಿಂದ ತಮ್ಮ ಮೂಲಸ್ಥಾನವಾಗಿ ಹಾಡಿಕಟ್ಟಿ ಬದುಕುತ್ತಿದ್ದರು. 1977ರ ನಂತರ ಅಲ್ಲಿಂದ ಇವರನ್ನು ಈಗಿರುವ ಚೆಟ್ಟಳ್ಳಿ ಜಾಗಕ್ಕೆ ಕರೆತಂದು ರಸ್ತೆ ಬದಿಯ ಜಾಗದಲ್ಲೇ ಇರುವಂತೆ ಅಧಿಕಾರಿಗಳು ಸೂಚಿಸಿದರು. ಅರಣ್ಯದೊಳಗಿನ ಬಿದಿರು, ಹುಲ್ಲು,ಕಡ್ಡಿ ಮಣ್ಣಿನಿಂದ ಸಾರಿಸಿದ ಗುಡಿಸಲೇ ಅಂದಿನಿಂದ ಇವರಿಗೆ ಆಶ್ರಯ ತಾಣವಾಗಿದೆ. ಕುಡಿಯಲು ನೀರಿಲ್ಲದೆ ಪಕ್ಕದಲ್ಲೇ ಗುಂಡಿ ತೋಡಿ ಕೆಸರಿನ ನೀರನ್ನೇ ಕುಡಿದು ಬದುಕುವ ಪರಿಸ್ಥಿತಿ ಇವರದ್ದು.

ಕೆಲವು ಸಮಯದ ಹಿಂದೆ ವೀರಾಜಪೇಟೆ ತಾಲೂಕಿನ ಹಾಡಿಗಳ ಸರ್ವೇ ಸಂದರ್ಭದಲ್ಲಿ ನಾಲ್ಕೇರಿಯ ತಟ್ಟೆಕೆರೆ, ತಿತಿಮತಿಯ ಮಜ್ಜಿಗೆ ಹಳ್ಳ, ಆಯಿರ ಸುಳಿ, ಜಂಗಲ್ ಹಾಡಿ, ಚೇಣಿ ಹಡ್ಲು, ಬೊಂಬು ಕಾಡು, ಕಾರೆಕಂಡಿ, ಗೋಣಿಗದ್ದೆ, ನಾಣಚ್ಚಿ ಗದ್ದೆ, ಬಾಳೆಕೋವು, ಸಿದ್ದಾಪುರ, ಕೊಡಂಗೇರಿಗಳಂತಹ ಹತ್ತು ಹಲವು ಹಾಡಿಗಳ ಸಮೀಕ್ಷೆ ನಡೆಯಿತು. ಜತೆಗೆ 279 ಎಕರೆ ಜಾಗ ಹಾಗೂ 48 ಕುಟುಂಬಗಳಿರುವ ನಾಗರಹೊಳೆ ಹಾಡಿ ಸರ್ವೇ ಕಾರ್ಯವೂ ನಡೆದು ವರದಿ ತಯಾರಾಯಿತು. ಆದರೆ ಈವರೆಗೆ ಇವರು ಯಾರಿಗೂ ಹಕ್ಕು ಪತ್ರ ನೀಡಲೇ ಇಲ್ಲ, ಕೆಲವರಿಗೆ ಕೇವಲ 0.05 ಸೆಂಟ್ಸ್ ಜಾಗವನ್ನು ನೀಡಲು ತೀರ್ಮಾನಿಸಿದ್ದಾರೆ. ‘ಆದರೆ ಇಷ್ಟರಿಂದ ನಮ್ಮ ಬದುಕು ಕಟ್ಟಿಕೊಳ್ಳಲು ಹೇಗೆ ಸಾಧ್ಯ?’ ಎನ್ನುವುದು ಈ ಜನರು ಕೇಳುತ್ತಿರುವ ಪ್ರಶ್ನೆ.

‘ನಮ್ಮನೆಲ್ಲ ಇಲ್ಲಿಂದ ಎತ್ತಂಗಡಿ ಮಾಡಲು ಅರಣ್ಯ ಇಲಾಖೆಯ ಹಲವು ಅಧಿಕಾರಿಗಳು ಯತ್ನಿಸುತ್ತಿದ್ದಾರೆ. ಅವರ ಜತೆಗೆ ಕೆಲವು ಪರಿಸರವಾದಿಗಳು ಎನ್ನಿಸಿಕೊಂಡವರೂ ಕೈಜೋಡಿಸಿದ್ದಾರೆ. ನಾವು ಈ ಕಾಡು ಬಿಟ್ಟು ಎಲ್ಲೂ ಹೋಗಲ್ಲ. ಕಾಡೇ ನಮ್ಮ ಜೀವ. ನಮ್ಮ ಸಂಪ್ರದಾಯದ ಆರಾಧನೆಗಳೆಲ್ಲ